(ಇಂದು ದಿನಾಂಕಃ 24-10-2025 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ - ವಾದಿ ಪರ ಶ್ರೀ ಪಿ.ಎಸ್.ಎನ್ ವಕೀಲರಿಂದ-**

ನಾನು ಈ ಪ್ರಕರಣದಲ್ಲಿ ವಾದಿಯಾಗಿದ್ದು, ನಾನು ದಾವೆಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಶಾನೆಯನ್ನಾಗಿ ಗುರುತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ದಿನಾಂಕಃ10-12-2021ರಂದು ವಾದಿ ಹಾಗೂ ಪ್ರತಿವಾದಿಯವರ ನಡುವೆ ದಿನಾಂಕಃ11-11-2021ರ ಕ್ರಯ ಪೂರ್ವ ವಚನ ಪತ್ರದ ಪ್ರಕಾರ ಬಾಕಿ ಉಳಿದ ರಖಂ ಪೈಕಿ ಹಣ ನೀಡಿದ ಬಗ್ಗೆ ರಶೀದಿ ಪತ್ರದ ಮೂಲ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು ಹಾಗೂ ವಾದಿಯವರ ಸಹಿಯನ್ನು ನಿಪಿ-1(ಎ) ಮತ್ತು ಪ್ರತಿವಾದಿಯವರ ಸಹಿಯನ್ನು ನಿಪಿ-1(ಬಿ) ಎಂದು, ದಿನಾಂಕಃ17-08-2022ರಂದು ಅಂಕೋಲ ಪೋಲಿಸ್ ಠಾಣೆಯವರು ನೀಡಿದ ಸ್ವೀಕೃತಿಯನ್ನು ನಿಪಿ-2 ಎಂದು, ಪ್ರತಿವಾದಿಯವರ ವಿರುದ್ಧ ಅಂಕೋಲ ಪೋಲಿಸ್ ಠಾಣೆಯಲ್ಲಿ ನೀಡಿದ ದೂರಿನ ಯಥಾ ನಕಲನ್ನು ನಿಪಿ-3 ಎಂದು, ಬೊಗ್ರಿಬೈಲ್ ಗ್ರಾಮದ ಸರ್ವೆ ನಂ.73 ಹಿಸ್ಸಾ 13ರ ಪಹಣಿ ಪ್ರತಿಕೆಯನ್ನು ನಿಪಿ-4 ಎಂದು, ಮಿಸಲೆನಿಯಸ್ ಸಂಖ್ಯೆ44/2023ರ ಆದೇಶ ಹಾಳೆಯ ದೃಡೀಕೃತ ಪ್ರತಿಯನ್ನು ನಿಪಿ-5 ಎಂದು, ಮಿಸಲೆನಿಯಸ್ ಸಂಖ್ಯೆ44/2023ರಲ್ಲಿ ಕಲಂ 24ರಡಿಯಲ್ಲಿ ಸಲ್ಲಿಸಿದ ಅರ್ಜಿಯ ದೃಡೀಕೃತ ಪ್ರತಿಯನ್ನು ನಿಪಿ-6 ಎಂದು, ದಿನಾಂಕಃ 26-09-2023ರಂದು ಪ್ರತಿವಾದಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ-7 ಎಂದು, ನೋಟಿಸ್ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು ನಿಪಿ-8 ಎಂದು, ಪ್ರತಿವಾದಿಯ ಸಹಿಯನ್ನು ನಿಪಿ-8(ಎ) ಎಂದು, ಪ್ರತಿವಾದಿಯವರು ನೋಟಿಸಿಗೆ ನೀಡಿದ ಉತ್ತರವನ್ನು ನಿಪಿ-9 ಎಂದು, ವಾದಿಯವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ 02-11-

2021ರಿಂದ 31-12-2022ರವರೆಗಿನ ಖಾತೆಯ ಉತಾರನ್ನು ನಿಪಿ-10 ಎಂದು ಗುರುತಿಸಲಾಯಿತು.

**ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಾದ ಶ್ರೀ ಡಿ.ಎಸ್.ಬಿರವರು ಪಾಟೀ ಸವಾಲಿಗೆ ಸಮಯವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ